| | | |
|---|---|---|
| ಒ ಎಸ್ | 119/2017 | ಪಿ.ಡಬ್ಲ್ಯೂ 1 |

ಇಂದು ದಿಃ 29.07.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಇ ಎಂ ಕೆ ವಕೀಲರಿಂದಃ

ನನ್ನ ಯಜಮಾನರ ತಂದೆಯ ಹೆಸರು ರಾಚಶೆಟ್ಟಿ. ನನ್ನ ಗಂಡನ ಹೆಸರು ರಾಚಶೆಟ್ಟಿ. ನನ್ನ ಮಾವನ ಒಡಹುಟ್ಟಿದವರು ಒಟ್ಟು ಆರು ಜನ ಅಣ್ಣತಮ್ಮಂದಿರು ಎಂದರೆ ಸರಿ. ನನ್ನ ಮಾವನ ಅಣ್ಣತಮ್ಮಂದಿರು ಒಟ್ಟಾಗಿ ಖರೀದಿಸಿ ನಂತರ ವಿಭಾಗ ಮಾಡಿಕೊಂಡರು ಎಂದರೆ ಸರಿಯಲ್ಲ. ಅವರು ತಾತ ಸಂಪಾದಿಸಿದರು. ನನ್ನ ಮದುವೆ 1978 ರಲ್ಲಿ ಆಯಿತು. ನನ್ನ ಮಾವನ ಅಣ್ಣತಮಂದಿರು ಆಸ್ತಿ ವಿಭಾಗವನ್ನು ನನ್ನ ಮದುವೆಯ ಪೂರ್ವದಲ್ಲಿ ಮಾಡಿಕೊಂಡಿದ್ದರು. ಆ ಕಾರಣ ನನ್ನ ಮಾವನ ಅಣ್ಣತಮ್ಮಂದಿರು ಯಾವ ರೀತಿ ಆಸ್ತಿ ಸಂಪಾದಿಸಿದರು ಮತ್ತು ವಿಭಾಗ ಮಾಡಿಕೊಂಡರು ಎನಲ್ಲುವ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಮಾವನಿಗಾಗಲಿ ಅಣ್ಣತಮ್ಮದಿರಗಾಗಲಿ ಯಾವುದೇ ಪಿತ್ರಾರ್ಜಿತ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿ ಇತ್ತು ಎನ್ನುವ ಬಗ್ಗೆ ಯಾವುದಾದರೂ ದಾಖಲೆ ಕೊಟ್ಟಿದ್ದೀರ ಎಂದರೆ ಇಲ್ಲ ಆ ರೀತಿ ಹೇಳುತ್ತಿದ್ದರು ಎನ್ನುತ್ತಾರೆ.

ಎಷ್ಟು ಐಟಂ ಆಸ್ತಿಯಲ್ಲಿ ವಿಭಾಗ ಕೇಳಿದ್ದೇನೆ ಗೊತ್ತಿಲ್ಲ, ಆದರೆ ಎಷ್ಟು ಇದೆ ಅಷ್ಟಕ್ಕೆ ಕೇಳಿದ್ದೇವೆ. ತುಂಬಾ ಆಸ್ತಿಗಳು ಇರುವ ಕಾರಣ ಚೆಕ್ಕುಬಂದಿ ಹೇಳಲು ಆಗುವುದಿಲ್ಲ. 1ನೇ ಪ್ರತಿವಾದಿಯು ನಂಜನಗೂಡಿಗೆ 1964 ರಲ್ಲಿ ಬಂದು ಅವರ ಚಿಕ್ಕಪ್ಪನ ಜೊತೆ ಕಾಂಟ್ರಾಕ್ಟರ್ ಕೆಲಸಕ್ಕೆ ಬಂದಿದ್ದರು ಮತ್ತು ಅದು ನನಗೆ ಗೊತ್ತಿಲ್ಲ. ನನ್ನ ಗಂಡನು ಸಹ ಗರುಳಾಪುರದಿಂದ ನಂಜನಗೂಡಿಗೆ ಬಂದು 1ನೇ ಪ್ರತಿವಾದಿ ಜೊತೆ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಅವರ ಚಿಕ್ಕಪ್ಪನ ಜೂತೆ ಕೆಲಸ ಮಾಡಿ ಸ್ವಲ್ಪ ಸಂಪಾದನೆ ಮಾಡಿ ದಾವಾ ಆಸ್ತಿ 18 ಮತ್ತು 19 ಅನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. ಆ ಎರಡು ಆಸ್ತಿಗಳು ಅವರ ಸ್ವಯಾರ್ಜಿತ ಆಸ್ತಿಯಾದ ಕಾರಣ ಅದನ್ನು ಮಾರಾಟ ಮಾಡಿದ್ದರು ಎಂದರೆ ಅದು ಸ್ವಯಾರ್ಜಿತವಲ್ಲ ಪಿತ್ರಾರ್ಜಿತ ಅದು ಎಲ್ಲರಿಗೂ ಸೇರಬೇಕು. ಐಟಂ 19 ರ ಆಸ್ತಿಯ ಸರ್ವೆ ನಂಬ್ ಗೊತ್ತಿಲ್ಲ ಆದರೆ ಒಟ್ಟು 8 ಎಕರೆ ಆಸ್ತಿ ಇದೆ. ನಾನು ಐಟಂ 19ನೇ ಆಸ್ತಿಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಐಟಂ 16 ಆಸ್ತಿಯು ಕಾಳಿಪುರದಲ್ಲಿ ಗ್ರಾಮದಲ್ಲಿ ಇದೆ. ಐಟಂ 16ರ ಆಸ್ತಿಯು ಸಿದ್ದಶೆಟ್ಟಿಯವರ ಹೆಸರಿನಲ್ಲಿ ಇದೆ ಎಂದರೆ ಇರಬಹುದು. ನನ್ನ ಮಾವನವರ ಆಸ್ತಿಯು ಮಸಣಶೆಟ್ಟಿಯವರ ಹೆಸರಿನಲ್ಲಿ ಇತ್ತು. ಅದರ ಸರ್ವೆ ನಂಬರ್ 13 ಮತ್ತು 23. ಮಸಣಶೆಟ್ಟಿಯವರು ಅವರ ಆಸ್ತಿಯನ್ನು 19.08.1993 ರಲ್ಲಿ ಮಕ್ಕಳಿಗೆ ವಿಭಾಗ ಮಾಡಿಕೊಟ್ಟ ವಿಚಾರ ಗೊತ್ತಿಲ್ಲ. ಆ ರೀತಿ ವಿಭಾಗ ಮಾಡುವಾಗ 1ನೇ ಪ್ರತಿವಾದಿಗೆ 16ನೇ ಐಟಂ ಸ್ವತ್ತನ್ನು ಕೊಟ್ಟಿದ್ದಾರೆ ಎಂದರೆ ಸರಿ. ಆ ಕಾರಣ 16ನೇ ಐಟಂ 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

ಐಟಂ ನಂಬರ್ 15ರ ಆಸ್ತಿಯನ್ನು 1ನೇ ಪ್ರತಿವಾದಿಯು 18ನೇ ಪ್ರತಿವಾದಿಗೆ 24.01.2008 ರಲ್ಲಿ ನೊಂದಾಯಿತ ಧಾನ ದಾನ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಧಾನ ಆಸ್ತಿಯಲ್ಲಿಯಾ ಸಹ ನನಗೆ ಭಾಗ ಬೇಕು ಎಂದು ಕೃಷ್ಣಸ್ವಾಮಿಯನ್ನು ಪಾರ್ಟಿ ಮಾಡಿದ್ದೇವೆ ಎಂದರೆ ಸರಿ. 1ನೇ ಪ್ರತಿವಾದಿ ಪ್ರಕಾರ ಮಸಣಶೆಟ್ಟಿ 15ನೇ ಐಟಂ ಆಸ್ತಿಯನ್ನು ಖರೀದಿ ಮಾಡಿ 1ನೇ ಪ್ರತಿವಾದಿ ಹೆಸರಿಗೆ ಧಾನ ಮಾಡಿಕೊಟ್ಟರು ಎಂದರೆ ಸರಿಯಲ್ಲ. ಮಾಸಣಶೆಟ್ಟಿ 1ನೇ ಪ್ರತಿವಾದಿಗೆ ಆಸ್ತಿ ಕೊಟ್ಟ ವಿಚಾರ ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಯಜಮಾನರ ಅಣ್ಣತಮ್ಮಂದಿರು ಎಲ್ಲರು ಒಂದೇ ಕುಟುಂಬದಲ್ಲಿ ಸೇರುವುದನ್ನು ನಾನು ನೋಡಿರುತ್ತೇನೆ. ನನ್ನ ಯಜಮಾನರು ಸುಮಾರು 30 ವರ್ಷದಿಂದ ಇದ್ದೇವೆ. ನಂಜನಗೂಡಿನಲ್ಲಿ ಮಸಣಶೆಟ್ಟಿಯವರ ಒಂದು ಮನೆಯನ್ನು ನಮಗೆ ವಾಸಕ್ಕೆ ಕೊಟ್ಟರು ಎಂದರೆ ಕೆಲಸ ಮಾಡಿದ್ದೇವೆ ಅದಕ್ಕೆ ಕೊಟ್ಟಿದ್ದರು. ನನ್ನ ಯಜಮಾನರ ಅಣ್ಣತಮ್ಮಂದಿರು ನನ್ನ ಜೊತೆ ಚೆನ್ನಾಗಿದ್ದಾರೆ. ಆ ಪೈಕಿ ಒಬ್ಬರು ಕರಾಳಾಪುರ ಮತ್ತು ಉಳಿದವರು ನಂಜನಗೂಡಿನ ಬೇರೆ ಬೇರೆ ಮನೆಯಲ್ಲಿ ವಾಸವಿದ್ದಾರೆ. ನಾನು ಈಗ ಬೆಂಗಳೂರಿನ ನನ್ನ ಅಳಿಯನ ಮನೆಯಲ್ಲಿ ವಾಸವಿದ್ದೇನೆ. 1ನೇ ಪ್ರತಿವಾದಿಯು ಕಮರಳ್ಳಿಯ 5 ಎಕರೆ ಆಸ್ತಿಯನ್ನು ಮಾರಾಟ ಮಾಡಿ ಮನೆಯನ್ನು ಖರೀದಿಸಿರುತ್ತಾರೆ.

ನ್ಯಾಯಾಲಯಕ್ಕೆ ನಾನು ನನ್ನ ಮಾವನವರು ಖರೀದಿಸಿದ ಒಟ್ಟು 4 ಅಸಲು ಕ್ರಯಪತ್ರಗಳನ್ನು ಕೊಟ್ಟಿರುತ್ತೇನೆ. ಅಸಲು ಕ್ರಯಪತ್ರಗಳನ್ನುನನ್ನ ಮಾವನವರು ನನಗೆ ಕೊಟ್ಟಿದ್ದರು. ಯಾವ ಸಂದರ್ಭದಲ್ಲಿ ಕೊಟ್ಟರು ಎಂದು ನನಗೆ ಹೇಳಲು ಗೊತ್ತಾಗುವುದಿಲ್ಲ. ಅಸಲು ಕ್ರಯಪತ್ರಗಳನ್ನು ನನ್ನ ಗಂಡ ಮೋಸದಿಂದ ಎತ್ತಿಕೊಂಡು ಬಂದರು ಎಂದರೆ ಸರಿಯಲ್ಲ. ನನ್ನ ಮಾವನವರು ದಿನಾಂಕ 16.03.1998 ರಲ್ಲಿ ಒಂದು ವಿಲ್ನಾಮೆ ಬರೆದಿದ್ದಾರೆ ಎಂದರೆ ಸರಿಯಲ್ಲ. ಆ ವಿಲ್ ನಾವೆಯನ್ನು 1ನೇ ಪ್ರತಿವಾದಿಯು ಪ್ರತಿವಾದಿ ಪತ್ರದಲ್ಲಿ ತಿಳಿಸಿದ್ದಾರೆ ಎಂದರೆ ಅದನ್ನು ನಾನು ತಿಳಿದುಕೊಂಡಿಲ್ಲ. ನನ್ನ ಮಾವನವರು ಎಲ್ಲ ಮಕ್ಕಳಿಗೆ ಆಸ್ತಿ ಹಂಚಿಕೆ ಮಾಡಿದ್ದಾರೆ ಎಂದು ವಿಲ್ ನಾವೆಯಲ್ಲಿ ಬರೆಸಿದ್ದಾರೆ ಎಂದರೆ ಸರಿಯಲ್ಲ. ಆ ವಿಲ್ ನಾಮೆ ಪ್ರಕಾರ ನನ್ನ ಗಂಡ ಮತ್ತು ಅವರ ಅಣ್ಣತಮ್ಮಂದಿರು ಆಸ್ತಿಯನ್ನು ಪಡೆದುಕೊಂಡು ಪ್ರತ್ಯೇಕವಾಗಿ ಇದ್ದಾರೆ ಎಂದರೆ ಸರಿಯಲ್ಲ. ನಮನ್ನು ಹೊರತುಪಡಿಸಿ ನನ್ನ ಗಂಡನ ಅಣ್ಣತಮ್ಮಂದಿರು ಖಾತೆ ಮಾಡಿಕೊಂಡಿದ್ದಾರೆ ನಾವು ಖಾತೆ ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಆರ್ ಟಿ ಸಿ ಗಳು ಯಾರ ಹೆಸರಿನಲ್ಲಿ ಇದೆ ಎಂದು ನಾನು ತಿಳಿದುಕೊಂಡಿಲ್ಲ. ನಾನು ಹಾಜರು ಮಾಡಿರುವ ಆರ್ ಟಿ ಸಿ ಗಳನ್ನು ನೋಡಿದ್ದಿರ ಎಂದರೆ ಸೃಷ್ಟಿಸಿದ್ದಾರೆ ಅಂದರೆ ನನ್ನ ಪ್ರಕಾರ ಆರ್ ಟಿ ಸಿ ಗಳನ್ನು ಸೃಷ್ಟಿಸಿಕೊಂಡಿದ್ದಾರೆ ಎನ್ನುತ್ತಾರೆ. ಆ ರೀತಿ ಸೃಷ್ಟಿಸಿದ ಬಗ್ಗೆ ನಂತರ ಗೊತ್ತಾಯಿತು. ಮೋಸದಿಂದ ಮಾಡಿಸಿಕೊಂಡಿದ್ದಾರೆ ಎಂದು ನಮಗೆ ಗೊತ್ತಾಗದ ಕಾರಣ ಅದನ್ನು ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ.

2021ನೇ ಸಾಲಿನಲ್ಲಿ ಖಾತೆಯನ್ನು ಪ್ರಶ್ನಿಸಿ ಆರ್ ಎ 9/2021 ನ್ನು ನಾವು ದಾಖಲಿಸಿದ್ದೇವೆ ಎಂದರೆ ಸರಿ. ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಇತ್ಯರ್ಥ ಮಾಡಿಕೊಳ್ಳಿ ಎಂದು ತಿಳಿಸಿದ್ದರು ಎಂದರೆ ಸರಿ. ಈ ದಾವೆ ವಿಚಾರ ನಡೆಯುವಾಗಲೆ ಆರ್ ಎ 9/2021 ತೀರ್ಮಾನವಾಗಿದೆ ಎಂದರೆ ಸರಿ. ನಂತರ ಆ ಆದೇಶವನ್ನು ಎಲ್ಲಿಯೂ ಬೇರೆ ಕಡೆ ಪ್ರಶ್ನಿಸಿಲ್ಲ. ಉಪವಿಭಾಗಾದಿಕಾರಿಗಳ ಆದೇಶವನ್ನು ಜಿಲ್ಲಾಧಿಕಾರಿಗಳಿಗೆ 21.01.2025 ರಂದು ತೀರ್ಪನ್ನು ಎತ್ತಿ ಹಿಡಿದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು.